ಸ್ಥಾಪನೆ: 1935 ಸಂಧ್ಯಾಕಾಲದ ದಿನಪತ್ರಿಕೆ 43ನೇ ದ ಪ್ರಕಟಣೆ

# ಪ್ರಭಾತ

ಸಂಪುಟ 43 ಸಂಚಿಕೆ 1 ಪುಟಗಳು 4 ಬೆಲೆ: 10 ಪೈಸೆ

PRABHAT EVENING DAILY, MANGALORE.

ಶುಕ್ರವಾರ 20—1—1978

ಸ್ಥಾಪಕ ಸಂಪಾದಕರು ದಿವಂಗತ ಕುಡ್ವಿ ವಾಸುದೇವ ಶೆಣೈ

ಸಂಪಾದಕರು: ಎಚ್. ಮನಮೋಹನ ಕಾಮತ್

## ಪ್ರಭಾತ ಪತ್ರಿಕೆಗೆ ಶ್ರೀ ಕೆ. ಕೆ. ಪೈ ಸಂದೇಶ

ದೇಶದ ಪ್ರಮುಖ ಬೇಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬೇಂಕಿನ ಚೇರ್‌ಮೇನ್ ಶ್ರೀ ಕೆ. ಕೆ. ಪೈಯವರೊಂದಿಗೆ ಸಂದರ್ಶನ ನಡೆಸಿದಾಗ ಅವರು ಪುನರಾರಂಭವಾಗುವ ಪ್ರಭಾತಕ್ಕೆ ಕೊಟ್ಟ ಸಂದೇಶ ಇಂತಿದೆ:

"ಪ್ರಭಾತ" ಪತ್ರಿಕೆಯನ್ನು ಸ್ಥಾಪನೆ ಮಾಡಿದವರು ನನ್ನ ಪರಮ ಮಿತ್ರರಾದ ದಿ। ಕುಡ್ವಿ ವಾಸುದೇವ ಶೆಣೈ. ಕಷ್ಟ—ಕಾರ್ಪಣ್ಯಗಳಿದ್ದರೂ ಯಶಸ್ವಿಯಾಗಿ ಪತ್ರಿಕೆಯನ್ನು ಮುಂದೆ ತಂದಿದ್ದಾರೆ. ಪತ್ರಿಕಾ ಪ್ರಪಂಚಕ್ಕೆ ಒಂದು ಅಮೋಘ ಕೊಡುಗೆಯನ್ನಿತ್ತು ಹೋಗಿದ್ದಾರೆ. ಅದನ್ನು ನಡೆಸಿಕೊಂಡು ಹೋಗುವುದೇ ಒಂದು ದೃಷ್ಟಿಯಿಂದ ಪವಿತ್ರ ಕೆಲಸವೆಂದು ನನ್ನ ಭಾವನೆ."

(ಇತರ ವಿವರ 3ನೇ ಪುಟದಲ್ಲಿ)

ಪ್ರಭಾತ ಪತ್ರಿಕೆಯ ಸ್ಥಾಪಕ

**ಕುಡ್ವಿ ವಾಸುದೇವ ಶೆಣೈ**

ಜನನ: 29–8–1907

ನಿಧನ: 1–2–1977

ಪ್ರಭಾತ ಸ್ಥಾಪನೆ: 1935

(_ನೇ ಪುಟ ನೋಡಿ)

## ಮಂತ್ರಿ ಪಟ್ನಾಯಕ್ ಸಂದರ್ಶನ

ಮಂಗಳೂರಿಗೆ ಆಗಮಿಸಲಿರುವ ಕೇಂದ್ರ ಸರಕಾರದ ಉಕ್ಕು ಮತ್ತು ಗನಿ ಉದ್ದಿಮೆ ಮಂತ್ರಿ ಶ್ರೀ ಬಿಜು ಪಟ್ನಾಯಕ್ ಅವರು ಜನತಾ ಪಕ್ಷದ ವತಿಯಿಂದ ತಾ. 20ನೇ ಶುಕ್ರವಾರ ಸಂಜೆ 6 ಗಂಟೆಗೆ ಕಂಕನಾಡಿ ಮೈದಾನಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಲಿರುವರು,

# ಜಿಲ್ಲೆಯ ಚುನಾವಣಾ ಮುನ್ನೋಟ

# ರಾಜಕೀಯ ಬಿಸಿ ಏರಿಕೆ

**ಈ ಸಲ ಚುನಾವಣಾ ಕಳದಲ್ಲಿ ಕೆಲವೊಂದು ಹೊಸ ಮುಖಗಳು ಹಾಗೂ ಅನಿರೀಕ್ಷಿತ ವ್ಯಕ್ತಿಗಳು ಪ್ರಭಾವಿ ಮಹಾನುಭಾವರು ಪ್ರವೇಶಿಸುವ ವದಂತಿಗಳೂ ಕೇಳಿಬರುತ್ತಿವೆ.**

ಕರ್ನಾಟಕ ರಾಜ್ಯದ ಶಾಸನ ಸಭಾ ಚುನಾವಣೆ (ಫೆಬ್ರವರಿ 25) ಸಮೀಪಿಸಿದಂತೆಲ್ಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೀಗ ರಾಜಕೀಯ ವಾತಾವರಣದಲ್ಲಿ ಭಾರೀ ಚಟುವಟಿಕೆಗಳು ಕಾಣಿಸ ತೊಡಗಿ ದಿನದಿಂದ ದಿನಕ್ಕೆ ಕಾವು ಏರುತ್ತಾ ಇವೆ. ಮುಖ್ಯವಾಗಿ ವಿಭಜಿತ ಕಾಂಗ್ರೆಸಿನ ಎರಡು ಪಂಗಡಗಳಾದ ಇಂದಿರಾ ಗಾಂಧಿಯವರ ಅಭಿಮಾನಿ ದೇವರಾಜ ಅರಸ್ ಗುಂಪು ಮತ್ತು ಬ್ರಹ್ಮಾನಂದ ರೆಡ್ಡಿ ಬೆಂಬಲದ ಕೆ, ಎಚ್. ಪಾಟೀಲ್ ಕೂಟದವರು ಪರಸ್ಪರ ವಿರುದ್ಧವಾಗಿ ಸ್ಪರ್ಧಿಸಲು ಹವಣಿಸುತ್ತಿರುವಾಗ ಜನತಾ ಪಕ್ಷದವರು ಈ ಸಂದರ್ಭದ ಸದುಪಯೋಗ ಮಾಡಿಕೊಳ್ಳಲು ತೀವ್ರ ಪ್ರಯತ್ನವಲ್ಲಿದ್ದಾರೆ. ಆದರೆ ಜನತಾದೊಳಗೂ ಪರಿಸ್ಥಿತಿಯೇನೂ ಸಂಪೂರ್ಣ ತೃಪ್ತಿಕರವೆಂದೇನೂ ಹೇಳಬರುವುದಿಲ್ಲ. ಜನಸಂಘ, ಸಂಸ್ಥಾ ಕಾಂಗ್ರೆಸ್, ಸೋಷಲಿಸ್ಟ್ ಇತ್ಯಾದಿ ಬಣಗಳು ತಮ್ಮ ತಮ್ಮವರಿಗೆ ಸಿಂಹಪಾಲು ಪಡೆಯಲು ಹವಣಿಸುತ್ತಿವೆ. ಈ ಮಧ್ಯೆ ಬಲಕಮ್ಯೂನಿಸ್ಟರು ಇಂದಿರಾ ಕಾಂಗ್ರೆಸ್‌ನೊಂದಿಗೂ, ಎಡಕಮ್ಯೂನಿಸ್ಟ್ (ಮಾರ್ಕ್ಸಿಸ್ಟ್) ಪಕ್ಷದವರು ಜನತಾದೊಂದಿಗೂ ಚುನಾವಣಾ ಹೊಂದಾಣಿಕೆಗೆ ಸಿದ್ಧರಾಗಿದ್ದಾರೆ. ಈ ಸನ್ನಿವೇಶದಲ್ಲಿ ಕೆಲವೊಂದು ಕ್ಷೇತ್ರಗಳಲ್ಲಿ ಕೆಲವರು ಪಕ್ಷಾತೀತರು ತಮ್ಮ ನಶೀಬು ಖುಲಾಯಿಸೀತೇ ಎಂದು ಹೊಂಚು ಹಾಕಿಕೊಂಡಿರುವುದು ವಿಶೇಷವೇನೂ ಅಲ್ಲ. ಜಿಲ್ಲೆಯ ಪುನರ್ರಚಿತ 16 ಶಾಸನ ಸಭಾ ಕ್ಷೇತ್ರಗಳ ಪೈಕಿ ಐದನ್ನಾದರೂ ಇಂದಿರಾ ಕಾಂಗ್ರೆಸ್‌ನವರು ಉಳಿಸಿಕೊಳ್ಳಲು ಬಿರುಸಿನ ಸಿದ್ಧತೆ ಮಾಡುತ್ತಿದ್ದಾರೆ. ರೆಡ್ಡಿ ಕಾಂಗ್ರೆಸ್‌ನವರು ಕಡಿಮೆ ಪಕ್ಷ ನಾಲ್ಕು ತಮಗೆ ದಕ್ಕಬಹುದೆಂದು ಆಶಿಸಿದ್ದಾರೆ. ಜನತಾದವರಿಗೆ ನಾಲ್ಕು ಸ್ಥಾನಗಳು ಲಭಿಸಿದರೆ ಆಶ್ಚರ್ಯವಿಲ್ಲದು. ಮಾರ್ಕ್ಸಿಸ್ಟರು 1, ಬಲಕಮ್ಯೂನಿಸ್ಟರು 1, ಹಾಗೂ ಓರ್ವ ಪಕ್ಷಾತೀತರು ವಿಜಯಿಯಾಗಬಹುದೆಂದೂ ರಾಜಕೀಯ ನಿಷ್ಪಕ್ಷ ವೀಕ್ಷಕರು ಅಭಿಪ್ರಾಯಪಟ್ಟಿರುತ್ತಾರೆ. ಯಾವುದಕ್ಕೂ ಯಾವ ಪಕ್ಷದ ಉಮೇದುವಾರ ಯಾರು ಎಂಬುದೇ ಖಾತರಿಯಾಗಿ ಇನ್ನೂ ಗೊತ್ತಾಗಿಲ್ಲವಾದ್ದರಿಂದ ಪ್ರಾಯಶಃ ಬರೇ ಊಹಾಪೋಹೆಗಳಿಂದ ಪ್ರಯೋಜನವೇನೂ ಆಗದೆಂದು ದೃಢವಾಗಿ ಸೇಳಬಹುದು ಏನೇ ಆಗಲಿ ಈಸಲ ಕೆಲವೊಂದು ಪವಾಡಗಳು ನಮ್ಮ ಜಿಲ್ಲೆಯ ಚುನಾವಣಾ ಇತಿಹಾಸದಲ್ಲಿ ಸಂಭವಿಸಲಿವೆಯೆಂಬುದಂತೂ ನಿಶ್ಚಯ. ಕಳೆದ ಸಲ ಎಲ್ಲಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸೇ ಗೆದ್ದಿತ್ತು. ಈಸಲ ಹೇಗಾದೀತು ಎಂದು ಭವಿಷ್ಯ ಹೇಳುವುದಂತೂ ಕೈಲಾಗದ ಕೆಲಸ ಮಂತದಾರ ಎಚ್ಚತ್ತಿದ್ದಾನೆ. ತನ್ನ ಹೊಣೆ ಅರಿತುಕೊಂಡಿದ್ದಾನೆ. ಏನಾಗುವುದೋ ಕಾದು ನೋಡೋಣ. ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣೆ ಬಗ್ಗೆ ನಿರ್ಭಯವಾಗಿ ಜನರು ತಮ್ಮೊಳಗೇ ಚರ್ಚಿಸಲು ಆರಂಭಿಸಿರುವುದು ಒಂದು ಶುಭ ಲಕ್ಷಣ.

## ವರದಕ್ಷಿಣೆ ವಿರುದ್ಧ ವಿಚಾರಗೋಷ್ಠಿ

ವರದಕ್ಷಿಣೆಯು ಸಾಮಾಜಿಕ ಕಂಟಕ ಎಂಬ ಕುರಿತು ವಿಚಾರಗೋಷ್ಠಿಯೊಂದು ವಾರ್ತಾ ಮತ್ತು ಪ್ರಚಾರ ಇಲಾಖೆ ಹಾಗೂ ಮಂಗಳೂರು ಮಹಿಳಾ ತಾಂತ್ರಿಕ ಶಿಕ್ಷಣ ಶಾಲಾ ಜಂಟಿ ಆಶ್ರಯದಲ್ಲಿ ತಾ. 17ರಂದು ಮಹಿಳಾ ಪೊಲಿಟೆಕ್ನಿಕ್ ವಠಾರದಲ್ಲಿ ಜರಗಿತು. ಶ್ರೀಮತಿ ಬಿ.ಆರ್ ಸ್ವರ್ಣ, ಕುಮಾರಿ ವಾರಿಜ, ಕು। ಕುಸುಮಾವಳಿ, ಕು। ವಸಂತಿ ಭಟ್, ಶ್ರೀ ಸಿರಂಜನ ಮೂರ್ತಿ, ಶ್ರೀ ಜಯಚಂದ್ರ ಮೊದಲಾದವರು ಮಾತನಾಡಿದರು. ವರದಕ್ಷಿಣೆ ಪಡೆಯುವುದು ಕಾನೂನಿನ ಪ್ರಕಾರ ಈಗ ತಕ್ಷೀರು ಆಗುವುದೆಂದೂ ಆ ಪಿಡುಗನ್ನು ಹೋಗಲಾಡಿಸಲು ಹೆತ್ತವರ ಮನವೊಲಿಸಬೇಕೆಂದೂ ಹಲವರು ಅಭಿಪ್ರಾಯ ವ್ಯಕ್ತಪಡಿಸಿದರು ವರದಕ್ಷಿಣೆ ಸ್ವೀಕರಿಸುವುದಿಲ್ಲ ಮತ್ತು ಕೊಡುವುದೂ ಇಲ್ಲ ಎಂಬುದಾಗಿ ಹಲವರು ಸಾಮೂಹಿಕವಾಗಿ ಪ್ರತಿಜ್ಞಾ ಸ್ವೀಕಾರ ಮಾಡಿದರು. ಸಭಾರಂಭದಲ್ಲಿ ಜಿಲ್ಲಾ ವಾರ್ತಾಧಿಕಾರಿ ಶ್ರೀ ಟಿ. ಎಚ್. ಸಿದ್ಧರಾಮಯ್ಯನವರು ಸ್ವಾಗತಿಸಿದ್ದರು. ಕೊನೆಯಲ್ಲಿ ಪ್ರಚಾರ ಇಲಾಖೆಯವರಿಂದ ಚಲಚ್ಚಿತ್ರ ಪ್ರದರ್ಶನವೂ ಇತ್ತು.

## ಸಂಕೋಲೆ - ಸಂಗ್ರಾಮ ಸ್ವಾತಂತ್ರ್ಯ ಪ್ರದರ್ಶನ

ತುರ್ತು ಪರಿಸ್ಥಿತಿಯ ಕಾಲದಲ್ಲಿ ನಡೆದ ದೌರ್ಜನ್ಯದ ಮೇಲೆ ಬೆಳಕು ಬೀರುವ ಸಂಕೋಲೆ-ಸಂಗ್ರಾಮ-ಸ್ವಾತಂತ್ರ್ಯ ಎಂಬ ಪ್ರದರ್ಶನವು ತಾ. 20ರಿಂದ ನಾಲ್ಕು ದಿನಗಳ ವರೆಗೆ ಮಂಗಳೂರು ಗಾಂಧಿನಗರದಲ್ಲಿನ ಪ್ರತಾಪ ನಗರದ ಸಂಘನಿಕೇತನದಲ್ಲಿ ಏರ್ಪಡುವುದು.

ಪ್ರಭಾತ

## ನಮನ

ಪ್ರಭಾತವು ಸ್ವಾತಂತ್ರ್ಯ ಪೂರ್ವದಲ್ಲಿ ಜನಿಸಿ ತನ್ನ ಉದ್ದೇಶ ಸಾಧಿಸಿಕೊಂಡ ದಿವ್ಯ ಪರಂಪರೆಯುಳ್ಳ ಪತ್ರಿಕೆ. ಇದು 42 ವರ್ಷಗಳಿಂದಲೂ ಅನೂಚಾನವಾಗಿ ಜನತೆಯ ಸೇವೆ ಮಾಡುತ್ತಾ ಬಂದಿದೆ. ಇದರ ಸ್ಥಾಪಕ ಸಂಪಾದಕ ಶ್ರೀ ಕುಡ್ಪಿ ವಾಸುದೇವ ಶೆಣೈಯವರು ನಿಧನರಾದ ಪ್ರಯುಕ್ತ ಹೊಸ ಆಡಳಿತ ವ್ಯವಸ್ಥೆಯಲ್ಲಿ ಇದನ್ನು ಪುನರಾರಂಭಿಸುವ ಹೊಣೆಯನ್ನು ನಾವು ವಹಿಸಿರುತ್ತೇವೆ.

ದಿವಂಗತ ಕುಡ್ಪಿ ವಾಸುದೇವ ಶೆಣೈಯವರಂಥ ಹಿರಿಯ ಪತ್ರಿಕೋದ್ಯಮಿಯ ಸಾಮರ್ಥ್ಯ, ಚಾಕಚಕ್ಯತೆ ಅನುಭವಗಳು ಕಿರಿಯವರಾದ ನಮ್ಮಲ್ಲಿ ಇಲ್ಲವಾದರೂ ಅವರ ಅನುಗ್ರಹ ಹೊತ್ತು ಈ ಪ್ರಭಾತದ ಪ್ರಕಟಣೆಯ ಜವಾಬ್ದಾರಿಯನ್ನು ಶಿರಸಾ ವಹಿಸಿಕೊಂಡಿರುತ್ತೇವೆ. ''ವಾಸುಮಾಮ್'' ಅವರಿಗೆ ಶ್ರದ್ಧಾಂಜಲಿ ಅರ್ಪಿಸಿಯೇ ಈ ಪ್ರಥಮ ಸಂಚಿಕೆಯನ್ನು ವಾಚಕರ ಮುಂದಿರಿಸುತ್ತೇವೆ

ಪತ್ರಿಕೋದ್ಯಮದ ಬಗೆಗೆ ಚಿಕ್ಕಂದಿನಿಂದಲೂ ಇದ್ದ ಅಭಿಮಾನ, ಗೌರವಗಳ ನಿಮಿತ್ತವಾಗಿ, ಪತ್ರಿಕಾ ಧರ್ಮಕ್ಕೆ ಚ್ಯುತಿ ಬಾರದಂತೆ ನಮ್ಮಿಂದ ಸಾಧ್ಯವಿರುವಷ್ಟು ಪ್ರಾಮಾಣಿಕ ಸೇವೆ ಸಲ್ಲಿಸಲು ನಾವೀಗ ಕಟಿಬದ್ಧರಾಗಿರುತ್ತೇವೆ.

ಜನಸಾಮಾನ್ಯರಲ್ಲೂ ವಾಚನಾಭಿರುಚಿಯನ್ನು ಉಜ್ಜೀವನಗೊಳಿಸಿ ಯುವಜನರ ಆಶೋತ್ತರಗಳನ್ನು ಎತ್ತಿ ಹಿಡಿದು ಸಾಮಾಜಿಕ ಸಮಸ್ಯೆಗಳಿಗೆ ಕನ್ನಡಿ ಹಿಡಿದು ಈ ಪತ್ರಿಕೆಯ ಮುಖಾಂತರ ಶ್ರಮಿಸಬೇಕೆಂಬುದೇ ನಮ್ಮ ಆಕಾಂಕ್ಷೆ.

ದುರ್ಬಲ ವರ್ಗದವರ ಶ್ರೀ ಸಾಮಾನ್ಯರ ಬಡಬಗ್ಗರ ಕುಂದುಕೊರತೆಗಳನ್ನು ನೀಗಲು ಈ ಪತ್ರಿಕೆಯ ಮುಖಾಂತರ ಏನು ಮಾಡಬಹುದೋ ಅದನ್ನೆಲ್ಲ ಸಾಧ್ಯವಿದ್ದಷ್ಟು ಸಾಧಿಸಲು ಸಂಕಲ್ಪಿಸಿದ್ದೇವೆ.

ನಮ್ಮ ಈ ಸಾಹಸದಲ್ಲಿ ಮಹಾಜನರ ಬೆಂಬಲ ಪ್ರೋತ್ಸಾಹವನ್ನು ನಿರೀಕ್ಷಿಸುತ್ತೇವೆ ಮತ್ತು ಹಾಗೆ ಸಕಲರ ಕೃಪಕಟಾಕ್ಷ ನಮ್ಮ ಮೇಲಿರುವುದಾಗಿ ಭಾವಿಸಿ ಅದೇ ನಮಗೆ ಶ್ರೀ ರಕ್ಷೆಯೆಂದು ಪರಿಗ್ರಹಿಸಿ ಮುಂದಡಿಯಿಟ್ಟಿರುತ್ತೇವೆ.

ಸರಳವಾದ ತಿಳಿಯಾದ ಭಾಷೆಯಲ್ಲಿ ಪಕ್ಷಾತೀತವಾಗಿ ವಸ್ತುನಿಷ್ಠವಾಗಿ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯಲು ಮತ್ತು ಸಮಂಜಸವಾದುದನ್ನು ಜನತೆಯ ಮುಂದೆ ನಿರ್ಭೀತವಾಗಿ ಮಂಡಿಸಲು ಹಾಗೂ ಅಗತ್ಯವೆನಿಸಿದಾಗ ಸತ್ಯನಿಷ್ಠುರವಾಗಿ ಖಂಡಿಸಲು ಪತ್ರಿಕಾಕಾರರು ಹಿಂಜರಿಯಬಾರದೆನ್ನುವ ಮಾತಿನಲ್ಲಿ ನಮಗೆ ವಿಶ್ವಾಸವಿದೆ. ಹಾಗಾಗಿ ನಿರ್ದಿಷ್ಟವಾಗಿ ಈ ಹೊಸ ಪರಿಧಿಯಲ್ಲಿ ಮುನ್ನಡೆಯಲು ನಮ್ಮೊಂದಿಗೆ ಮಹಾಜನರು ಸಹಕರಿಸುವರೆಂಬ ಭರವಸೆಯುಳ್ಳವರಾಗಿದ್ದೇವೆ.


ವಾಸ್ತವಿಕತೆಯ ಅನ್ವೇಷಣೆ, ಸತ್ಯಾಸತ್ಯದ ನಿರೂಪಣೆ, ಜನಾಭಿಪ್ರಾಯ ಸಂಘಟನೆ, ಸುಸ್ಪಷ್ಟ ವಿಚಾರ ಪ್ರಚೋದನೆ, ನಿಷ್ಪಕ್ಷೀಯ ನೀತಿ ಪ್ರತಿಪಾದನೆಯ ಮಹತ್ವ ಅರಿತೇ ನಮ್ಮ ಲೇಖನಿ ಬಳಸಲು ಸದಾ ಎಚ್ಚರ ವಹಿಸುತ್ತೇವೆಂದೂ ನಮ್ಮ ಅಭಿಮಾನಿಗಳಿಗೆ ಆಶ್ವಾಸನೆಯನ್ನೀಯುತ್ತಿದ್ದೇವೆ.

ಪ್ರಭಾತದ ಒಡೆತನವನ್ನು ನಮಗೆ ವಹಿಸಿಕೊಟ್ಟ ಶ್ರೀ ಎಂ. ಅನಂತ ಪ್ರಭು (ಸಿಟಿ ಬೇಕರಿಯ ಮಾಲಿಕರು) ಅವರಿಗೆ ನಾವು ಸದಾ ಋಣಿಗಳೆಂದು ತುಂಬು ಹೃದಯದಿಂದ ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇವೆ.

## ದಿವಂಗತ

### ಕುಡ್ಪಿ ವಾಸುದೇವ ಶೆಣೈ

ಪ್ರಭಾತ ಪತ್ರಿಕೆಯ ಸ್ಥಾಪಕ ಸಂಪಾದಕ ಹಾಗೂ ಅದರ ಮಾಲಿಕರಾಗಿದ್ದ ದಿವಂಗತ ಶ್ರೀ ಕುಡ್ಪಿ ವಾಸುದೇವ ಶೆಣೈಯವರು ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯಮ



ಇತಿಹಾಸದಲ್ಲಿ ಮರೆಯಲಾಗದ ವ್ಯಕ್ತಿಯಾಗಿದ್ದಾರೆ. ಅವರು ಪತ್ರಿಕೋದ್ಯಮಕ್ಕೆ ಹಲವಾರು ವಿಧಾನಗಳಲ್ಲಿ ಸೇವೆ ಸಲ್ಲಿಸಿದ್ದರು. ಸದಾ ಬರವಣಿಗೆಯಲ್ಲೇ ಆಸಕ್ತರಾಗಿದ್ದ ಅವರು ಅಷ್ಟೇ ನಿಷ್ಠೆಯಿಂದ ಸಾಹಿತ್ಯದ ಹೊಸ ಆಯಾಮಗಳನ್ನೂ ಆವಿಷ್ಕಾರ ಮಾಡಿಕೊಂಡಿದ್ದರು.

ತನ್ನದೇ ಆದ "ಪ್ರಭಾತ"ವನ್ನು ಆರಂಭಿಸುವುದರ ಮೊದಲು ಅವರು ಸ್ವತಂತ್ರ ಭಾರತ, ಸ್ವದೇಶಾಭಿಮಾನಿ, ನವಭಾರತ, ಮೊದಲಾದ ಪತ್ರಿಕೆಗಳಲ್ಲೂ ಹೊಣೆಗಾರಿಕೆ ನಿರ್ವಹಿಸಿದ್ದರು. ಪ್ರಭಾತದಲ್ಲಿ ಹೊಸ ರೀತಿಯ ತನ್ನದೇ ಆದ ಶೈಲಿಯ ಬರಹಗಳನ್ನು ಪ್ರಕಟಿಸಿ ಶ್ರೀ ವಾಸುದೇವ ಶೈಣೆಯವರು ಜನಪ್ರಿಯರಾಗಿದ್ದರು. "ಸುವಾಸಿನಿ" ಎಂಬ ಮಾಸಿಕ ಮಹಿಳಾ ಪತ್ರಿಕೆಯನ್ನೂ ಅವರು ಕೆಲವು ಕಾಲ ನಡೆಸಿದ್ದರು.

ಕನ್ನಡ ಮತ್ತು ಕೊಂಕಣಿ ಭಾಷಾ ಸಾಹಿತಿಯೂ ಆಗಿದ್ದ ದಿವಂಗತ ಕುಡ್ಪಿ ವಾಸುದೇವ ಶೆಣೈಯವರು ಹಲವಾರು ನಾಟಕಗಳನ್ನೂ ಚಿಕ್ಕ ಕಥೆಗಳನ್ನೂ ಬರೆದಿದ್ದರು. ಅವು ಜನಪ್ರಿಯವಾಗಿವೆ. ಈಗಲೂ ಅವು ಸಾಹಿತ್ಯ ಕ್ಷೇತ್ರದಲ್ಲಿ ಸ್ಮರಣೀಯವಾಗಿವೆ.

ಒಂದಾಣೆ ಮಾಲೆ ಎಂಬ ಪ್ರಕಾಶನ ಕಾರ್ಯಕ್ಕೆ ಕೈ ಹಚ್ಚಿದ ಕುಡ್ಪಿಯವರು ಅದೊಂದು ಅದ್ಭುತ ಕ್ರಾಂತಿಕಾರಿ ಸಾಧನೆ ಮಾಡಿ ತೋರಿಸಿದ್ದಾರೆ. ಚಿಕ್ಕ ಪುಟ್ಟ ಕಥೆ, ನಾಟಕ, ಕ್ಷೇತ್ರ ಮಹಾತ್ಮೆ, ಸ್ಥಳ ಪುರಾಣ, ಮನೆಮದ್ದು, ಯಕ್ಷಗಾನ ಪ್ರಸಂಗ ಇತ್ಯಾದಿಗಳನ್ನು ಸಣ್ಣ ಹೊತ್ತಗೆಯಾಗಿ ಕೇವಲ ಒಂದಾಣೆಗೆ (ಆರು ಪೈಸೆ) ಒದಗಿಸುತ್ತಿದ್ದುದು ಸಾಹಸವೇ ಆಗಿತ್ತು. ಇಂಥ ಮುನ್ನೂರರಷ್ಟು ಕೃತಿಗಳು ಮಾರುಕಟ್ಟೆಗೆ ಬಂದಿದ್ದುವು. ಜನಸಾಮಾನ್ಯರನ್ನೂ ವಿದ್ಯಾರ್ಥಿ ವೃಂದವನ್ನೂ ಅವು ಆಕರ್ಷಿಸಿದ್ದವು. ಓದುವ ಸದಭಿರುಚಿಯನ್ನು ವೃದ್ಧಿಗೊಳಿಸಲು ಅವರು ಈ ಪ್ರಕಟಣೆಗಳ ಮೂಲಕ ವೈವಿಧ್ಯಮಯ ವಿಚಾರ ಪ್ರಚೋದಕ ಲೇಖನಗಳನ್ನು ಸ್ವಾಗತಿಸಿ ಉದಯೋನ್ಮುಖ ಬರಹಗಾರರಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದರು.

ಕುಡ್ಪಿಯವರ ವಿಡಂಬನೆ ಮತ್ತು ಹರಿತವಾದ ಟೀಕೆಗಳು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಆಗಿನ ಆಡಳಿತಗಾರರನ್ನು ದಂಗುಬಡಿಸುವಂತಿದ್ದುವು. ಅವರ ಚೂಪಾದ ಲೇಖನಿಯ ವ್ಯಂಗ್ಯ ಚಿತ್ರಗಳು ಹಾಗೂ ಹಾಸ್ಯದ ಹೊನಲು ಆಗ ಮನೆಮಾತಾಗಿತ್ತು. ಸ್ವಲ್ಪ ಸಮಯ ಪ್ರಭಾತವನ್ನು ದೈನಿಕ ಪತ್ರಿಕೆಯನ್ನಾಗಿಯೂ ಅವರು ನಡೆಸಿದ್ದರು.


ಆದೊಂದು ಕಾಲದಲ್ಲಿ ಈ ಜಿಲ್ಲೆಯಲ್ಲಿ ಪ್ರಭಾತವು ಅತ್ಯಂತ ಪ್ರಭಾವೀ ಪತ್ರಿಕೆಯಾಗಿತ್ತು.

ದಿವಂಗತ ಕುಡ್ಪಿಯವರು ಬರೆದ "ಸನ್ಯಾಸಿಯ ಗೊಂಗಡಿ'' ಎಂಬ ಮಾರ್ಮಿಕ ನಾಟಕವು ಮಣಿಪಾಲದಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾರೀ ಮೆಚ್ಚುಗೆಯನ್ನು ಪಡೆದಿತ್ತು. ಕರ್ನಾಟಕದಾದ್ಯಂತದಿಂದ ಬಂದಿದ್ದ ಸಾಹಿತಿಗಳೂ, ಸಮ್ಮೇಳನದ ಅಧ್ಯಕ್ಷರಾಗಿದ್ದ ದಿವಂಗತ ಶ್ರೀ. ಅ. ನ. ಕೃಷ್ಣರಾಯರೂ ಮುಕ್ತಕಂಠದಿಂದ ಆ ನಾಟಕದ ಬಗೆಗೆ ಶ್ಲಾಘಿಸಿದ್ದರು

ಶುಭ್ರವಾದ ಶರಾಯಿ, ಪಂಚೆಕಚ್ಚೆ ಉಟ್ಟ ದೋತರ, ಸ್ವಚ್ಛವಾದ ಟೋಪಿ ಧರಿಸಿದ ಕಡ್ಪಿ ವಾಸುದೇವ ಶೆಣೈಯವರ ವ್ಯಕ್ತಿತ್ವ ಬಹಳ ಸರಳ ಹಾಗೂ ಲಕ್ಷಣಯುತ. ಕಂಡಾಕ್ಷಣ ನಗುಮೊಗದಿಂದ ಸ್ವಾಗತಿಸಿ ಉಭಯ ಕುಶಲೋಪರಿ ವಿಚಾರಿಸುವ ಅವರು ಕಿರಿಯರನ್ನು ಆದರದಿಂದ ಬರಮಾಡಿ ಪ್ರೋತ್ಸಾಹಿಸುತ್ತಿದ್ದರು. ತಾನೊಬ್ಬ ಹೆಸರಾಂತ ಸಾಹಿತಿ ಅಥವಾ ಹಿರಿಯ ಪತ್ರಿಕೋದ್ಯಮಿ ಎಂಬ ಅಹಂಭಾವವೇನೂ ಇರದ ಅವರ ಸಜ್ಜನಿಕೆಯ ಸ್ವಭಾವ ಅವರ ಮೇಲೆ ಇನ್ನೂ ಹೆಚ್ಚು ಗೌರವಾದರಗಳನ್ನು ಉಂಟುಮಾಡುತ್ತಿತ್ತು. ಮೊದಲ ಭೇಟಿಯಲ್ಲೇ ಅವರು ಸಂದರ್ಶಕರ

(4ನೇ ಪುಟಕ್ಕೆ)

# ಕರ್ತೃತ್ವ ಶಕ್ತಿಯ ದ್ಯೋತಕ ಧೀಮಂತ ವ್ಯಕ್ತಿ



## ಶ್ರೀ ಕೆ. ಕೆ. ಪೈ

ಸಂದರ್ಶಕರು: ಅನಂತ ಪ್ರಭು
(ಪ್ರಭಾತದ ಮಾಜಿ ಸಂಪಾದಕರು)

**ಪ್ರಶ್ನೆ:** ಬ್ಯಾಂಕ್ ರಾಷ್ಟ್ರೀಕರಣದಿಂದ ಆಗಿರಬಹುದಾದ ಸಾಧಕ - ಬಾಧಕಗಳನ್ನು ತಿಳಿಸುವಿರಾ?

**ಉ:** ಬ್ಯಾಂಕ್ ರಾಷ್ಟ್ರೀಕರಣದ ಉದ್ದೇಶ ಸಾಧಕವೇ ಹೊರತು ಬಾಧಕವಲ್ಲ. ಜನಜೀವನದನ್ನು ಸುಧಾರಿಸುವುದು ಎಂದರೆ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಮನುಷ್ಯನನ್ನು ಮನುಷ್ಯನನ್ನಾಗಿಸುವುದು ರಾಷ್ಟ್ರೀಕರಣದ ಉದ್ದೇಶ.

1969ರಲ್ಲಿ ಬ್ಯಾಂಕ್ ರಾಷ್ಟ್ರೀಕರಣವಾಗುವ ಪೂರ್ವದಲ್ಲಿ ಬ್ಯಾಂಕುಗಳು ಇಂತಹ ಉದ್ದೇಶ ಹೊಂದಿರಲಿಲ್ಲ. ಅವುಗಳಿಗೆ ವ್ಯವಹಾರ ದೃಷ್ಟಿಯೇ ಪ್ರಮುಖವಾಗಿತ್ತು. ಜನರ ಆರ್ಥಿಕ ಮಟ್ಟ ಸುಧಾರಣೆ. ಕೃಷಿ, ಕೈಗಾರಿಕೆ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುವಲ್ಲಿ ವಿಶೇಷವಾಗಿ ಬ್ಯಾಂಕ್ ರಾಷ್ಟ್ರೀಕರಣದ ತರುವಾಯ ಆಗಿರುವ ಸಾಧನೆಯನ್ನು ರಾಷ್ಟ್ರೀಕರಣದ ಎಂಟನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮರು ಕಳಿಸುವುದು ಸೂಕ್ತವೇ ಆಗಿದೆ.

**ಪ್ರ:** ಬ್ಯಾಂಕ್ ರಾಷ್ಟ್ರೀಕರಣದ ಉದ್ದೇಶ ಯಶಸ್ವಿಯಾಗಿದೆ ಎಂದು ತಮಗನಿಸುತ್ತಿದೆಯೇ? ಸ್ವಲ್ಪ ವಿವರ ನೀಡುತ್ತೀರಾ?

**ಉ:** ಉದ್ದೇಶ ತಕ್ಕಮಟ್ಟಿಗೆ ಯಶಸ್ವಿಯಾಗಿದೆ. ಈ ಬಗ್ಗೆ ರಿಸರ್ವ್ ಬ್ಯಾಂಕು ಶೀಘ್ರದಲ್ಲಿಯೇ ಅಂಕಿ ಅಂಶಗಳನ್ನು ಪ್ರಕಟಿಸಲಿದೆ.

ಜನರ ಆವಶ್ಯಕತೆ ಮತ್ತು ಇತರ ಸೇವಾ ವಿಸ್ತರಣೆಯಲ್ಲಿ ತುಂಬಾ ಕೆಲಸವಾಗಿದೆ.

ರಾಷ್ಟ್ರೀಕರಣದ ನಂತರ ಪ್ರಥಮಬಾರಿಗೆ ವಾಣಿಜ್ಯ ಬ್ಯಾಂಕುಗಳು ಕೃಷಿಗೆ ಆಧ್ಯತೆ ನೀಡಿವೆ. ಹಿಂದೆ ಸಹಕಾರಿ ರಂಗದಲ್ಲಿ ಮಾತ್ರ ಇದು ಒಳಪಟ್ಟಿತ್ತು, ಉತ್ಪಾದನೆ ಮತ್ತು ಅಭಿವೃದ್ಧಿ ಸಾಲ ನೀಡುವಲ್ಲಿ ಗಮನಾರ್ಹ ಪ್ರಗತಿಯಾಗಿದೆ. ಸರಕಾರ ಮಾಡಬಹುದಾದ ಅನೇಕ ಕೆಲಸ ನಾವೇ ಮಾಡಿದ್ದೇವೆ.

**ಪ್ರ:** "ಸರಕಾರ ಮಾಡಬಹುದಾದ ಅನೇಕ ಕೆಲಸ ನಾವೇ ಮಾಡಿದ್ದೇವೆ." ಎಂದು ನೀವು ಹೇಳುವುದು ಸರ್ಕಾರದ ಅಸಮರ್ಥತೆಯ ಟೀಕೆ ಎಂದು ಭಾವಿಸಬಹುದೇ ಅಥವಾ ಸರ್ಕಾರದ ಕೆಲಸ ಕಾರ್ಯಗಳಲ್ಲಿ ಸಹಕರಿಸುವ ಆಸಕ್ತಿಯಾಗಿರಬಹುದೇ?

ಜನರು ತಮ್ಮ ಆವಶ್ಯಕತೆಗಳ ಪೂರೈಕೆಗೆ ಸರಕಾರವನ್ನೇ ಹೊಂದಿಕೊಳ್ಳುವುದು ಅಥವಾ ಸರಕಾರದ ಸಹಾಯವನ್ನೇ ನಿರೀಕ್ಷಿಸುವುದು ಸರಿಯಲ್ಲ. ನಾನು ಸರಕಾರದ ಅಸಮರ್ಥತೆ ಟೀಕೆಯನ್ನು ಮಾಡುತ್ತಿಲ್ಲ.

ನಮ್ಮದು ಒಂದು ಪ್ರಯೋಗ ಮಾತ್ರ. ಲಾಭದಾಯಕವಾಗಿ ಅಧಿಕ ಇಳುವರಿ ಬರುವ ತಳಿಗಳ ಹೊಸ ಗೊಬ್ಬರಗಳ ಇತ್ಯಾದಿ ಪ್ರಯೋಗ ನಾವೇ ಮಾಡಿ ಅದರ ಅನುಭವವನ್ನು ಜನರಿಗೆ ಒದಗಿಸುತ್ತಿದ್ದೇವೆ. "ಸಿಂಡಿಕೇಟ್ ಕೃಷಿ ಪ್ರತಿಷ್ಠಾನ" ಈ ದಿಶೆಯಲ್ಲಿ ಕಾರ್ಯ ಪ್ರವೃತ್ತವಾಗಿದೆ. 1966ರಲ್ಲಿ ಅಸ್ತಿತ್ವಕ್ಕೆ ಬಂದ. ಪ್ರಸಕ್ತ ಪ್ರತಿಷ್ಠಾನ ಈ ವರೇಗೆ 76 ಕೃಷಿ ವಿಚಾರ ವಿನಿಮಯ ಕೇಂದ್ರಗಳನ್ನು ಮತ್ತು ವಿವಿಧ ಹೈಸ್ಕೂಲ್ ಮತ್ತು ಜ್ಯೂನಿಯರ್ ಕಾಲೇಜುಗಳಲ್ಲಿ 110 ಭಾವೀ ರೈತರ ಸಂಘಗಳನ್ನು ಸ್ಥಾಪಿಸಿದೆ, ಕೃಷಿ ಮತ್ತು ಪಶುಸಂಗೋಪನಾ ಕ್ಷೇತ್ರದಲ್ಲಿ ಇತ್ತೀಚೆಗಿನ ತಾಂತ್ರಿಕ ಜ್ಞಾನವನ್ನು ತ್ವರಿತ ಗತಿಯಿಂದ ರೈತರಿಗೆ ಒದಗಿಸುವ ಮತ್ತು ಅದನ್ನು ಕಾರ್ಯಾಚರಣೆಗೆ ತರುವಲ್ಲಿ ನೆರವಾಗುವುದು. ಈ ಮೂಲಕ ಸಾಧ್ಯವಾಗಿದೆ.

ಸರಕಾರಕ್ಕೆ ಈ ಕೆಲಸ ಅಸಾಧ್ಯವೆಂದಲ್ಲ. ಸರಕಾರದಲ್ಲಿ ಗ್ರಾಮ ಸೇವಕರಿದ್ದಾರೆ. ಸಾಕಷ್ಟು ಇತರ ಶಿಬಂದಿಗಳಿದ್ದಾರೆ, ಧುರೀಣತ್ವವುಳ್ಳ ಶಿಬಂದಿಗಳನ್ನು "ಸೂಕ್ತ ಸ್ಥಳಕ್ಕೆ" "ಅರ್ಹವ್ಯಕ್ತಿಯನ್ನು" ಕಳುಹಿಸುವುದರ ಮೂಲಕ ಸರಕಾರಕ್ಕೂ ಇಂತಹ ಕೆಲಸ ಯಶಸ್ವಿಯಾಗಿ ಕೈಗೊಳ್ಳಬಹುದಾಗಿದೆ, ನಮ್ಮಲ್ಲಿ ಇದಕ್ಕಾಗಿಯೇ ಪರಿಣತೆಯುಳ್ಳ ತಜ್ಞರಿದ್ದಾರೆ.

**ಪ್ರ:** ಸಿಂಡಿಕೇಟ್ ಬ್ಯಾಂಕಿಗೆ ಸಂಬಂಧಪಟ್ಟಂತೆ ಕೃಷಿ, ಪಶು ಸಂಗೋಪನೆ, ಸಣ್ಣ ಕೈಗಾರಿಕೆ ಮತ್ತಿತರ ಕ್ಷೇತ್ರಗಳಲ್ಲಿನ ಪ್ರಗತಿ ಮತ್ತು ಯೋಜನೆಗಳನ್ನು ಸಂಕ್ಷಿಪ್ತವಾಗಿ ತಿಳಿಸುವಿರಾ?

**ಉ:** ಕೃಷಿ ಕ್ಷೇತ್ರದಲ್ಲಿ ಸಿಂಡಿಕೇಟ್ ಬ್ಯಾಂಕ್ ಹಲವೊಂದು ಯೋಜನೆಗಳನ್ನು ಯಶಸ್ವಿಯಾಗಿ ಕೈಗೊಂಡಿದೆ ಕೃಷಿಯಲ್ಲಿ ಆಸಕ್ತಿ ಉಳ್ಳವರನ್ನು ಒಟ್ಟು ಮಾಡಿ ತಜ್ಞರ ಮೂಲಕ ಅವರ ಸಮಸ್ಯೆಗಳನ್ನು ಪರಿಶೀಲಿಸಿ ಉಪಯುಕ್ತ ಸಲಹೆ ಕೊಡಲಾಗುತ್ತಿದೆ. "ಫಾರ್ಮ್ ಕ್ಲಿನಿಕ್"ಗಳ ಮೂಲಕ ವೈಯುಕ್ತಿಕ ಗಮನ ಹರಿಸುವತ್ತು ಮಹತ್ವ ಕಲ್ಪಿಸಲಾಗಿದೆ.

ಉಡುಪಿ ತಾಲ್ಲೂಕಿನ ಹೊಸಾಳ ಗ್ರಾಮ ದತ್ತಿ ಸ್ವೀಕಾರ ಪ್ರಯೋಗ ಯಶಸ್ಸುಗಳಿಸಿದೆ. ಒಂದು ಗ್ರಾಮದಲ್ಲಿನ ಪ್ರತಿಯೊಬ್ಬರ ಆರ್ಥಿಕ ಅಭಿವೃದ್ಧಿಗೆ ಬ್ಯಾಂಕುಗಳು ಯಾವ ರೀತಿ ಸಹಾಯ ಮಾಡಬಹುದು ಎಂಬುದಕ್ಕೆ ಹೊಸಾಳ ಒಂದು ನೈಜ ನಿದರ್ಶನ. ಪ್ರತಿಯೊಂದು ಇಂಚು ಭೂಮಿಯಲ್ಲಿ ಏನಾದರೂ ಮಾಡಬಹುದು, ಅಲ್ಲದೆ ಬಿಡುವು ಸಮಯವನ್ನು ಉತ್ಪಾದನೆ ಹೆಚ್ಚಿಸುವಲ್ಲಿ ಸದುಪಯೋಗ ಪಡಿಸಿಕೊಳ್ಳಬಹುದು ಎಂಬ ಆತ್ಮ ವಿಶ್ವಾಸ ಈ ಗ್ರಾಮದ ಜನರಲ್ಲಿ ಮೂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಗ್ರಾಮ ಪುನರ್ರಚನೆ ಯೋಜನೆ ಪ್ರಕಾರ ಗ್ರಾಮಗಳಿಗೆ ಸಂಬಂಧಿಸಿದಂತೆ ಕೃಷಿ, ಸಣ್ಣ ಕೈಗಾರಿಕೆ ಗುಡಿ ಕೈಗಾರಿಕೆ ಮತ್ತು ಸಾಮಾಜಿಕ, ಸಾಂಸ್ಕೃತಿಕ ಮತ್ತಿತರ ಚಟುವಟಿಕೆಗಳ ಅಭಿವೃದ್ಧಿಗಾಗಿ ಸಮೀಕ್ಷೆ ನಡೆಸಿ ಹಂತ

(4ನೇ ಪುಟಕ್ಕೆ)

FORM IV [Rule 8]

| | | |
|---|---|---|
| 1. Place of Publication | : | Kodialbail, Mangalore-3. |
| 2. Periodicity of Publication | : | Daily (except Sundays) |
| 3. Printer's Name | : | V. R. Kamath |
| Nationality | : | Indian |
| Address | : | B. G. School Road, Kodialbail, Mangalore-3 |
| 4. Publisher's Name | : | H. M. Kamath |
| Nationality | : | Indian |
| Address | : | B. G. School Road, Kodialbail, Mangalore-3. |
| 5. Editor's Name | : | H. M. Kamath |
| Indian | : | Indian |
| Address | : | B. G. School Road, Kodialbail, Mangalore-3. |
| 6. Names and addresses of individuals who own the newspaper | | V. R. Kamath, B. G. School Road, Kodialbail, Mangalore-3. |

I, H. M. Kamath hereby declare that the particulars given above are true to the best of my knowledge and belief.

Mangalore
20-1-1978

(Sd) ***H. M. Kamath***
Signature of the Publisher.


## ದಿ| ಕುಡ್ಪಿಯವರು

(2ನೇ ಪುಟದಿಂದ)

ವಂನ ಸೂರೆಗೊಳ್ಳುತ್ತಿದ್ದರು. ಜಿಲ್ಲೆಯ ಯಾವತ್ತೂ ಮುಂದಾಳುಗಳು ಶ್ರೀ ಕುಡ್ಪಿಯವರಿಗೆ ಆತ್ಮೀಯರು.

ಫ್ರೆಂಚ್ ಸಾಹಿತ್ಯ ಹಾಗೂ ಇಂಗ್ಲೀಷ್ ಗ್ರಂಥಗಳನ್ನೂ ವ್ಯಾಪಕವಾಗಿ ಅಧ್ಯಯನ ಮಾಡಿದ್ದ ದಿವಂಗತ ಕುಡ್ಪಿಯವರು ಒಳ್ಳೆಯ ಮಾತುಗಾರರು, ಸಾರ್ವಜನಿಕ ಭಾಷಣಗಳನ್ನು ಹೆಚ್ಚು ಮಾಡದಿದ್ದರೂ ಅವರೊಡನೆ ಆರಾಮವಾಗಿ ಚಕ್ಕಂದವಾಡಲು ಕುಳಿತವರು ಮೈಮರೆಯುವಷ್ಟು ವಿಚಾರ ಪ್ರವಾಹ ಅವರಲ್ಲಿತ್ತು. ರಾಜಕೀಯ, ಸಾಹಿತ್ಯ, ಕಲೆ ಮೊದಲಾದ ಹತ್ತು ಹಲವಾರು ಪ್ರಾಕಾರಗಳಲ್ಲಿ ಕೈಯಾಡಿಸಿರುವ ಕುಡ್ಪಿಯವರ ಹಾಸ್ಯ ಪ್ರವೃತ್ತಿ ನಗೆಚಟಾಕಿಗಳು ಅವರ ಮಿತ್ರ ವರ್ಗವನ್ನು ಯಾವಾಗಲೂ ಉಲ್ಲಸಿತಗೊಳಿಸುತ್ತಿತ್ತು. ಯಾವನೇ ವ್ಯಕ್ತಿಯನ್ನು ಚೆನ್ನಾಗಿ ಅಭ್ಯಾಸಮಾಡುವ ಪ್ರವೃತ್ತಿಯ ಅವರು ಯಾರಿಗೂ ನೋವಾಗದಂತೆ ಅದನ್ನು ನಿರೂಪಿಸುತ್ತಿದ್ದರು, ಅದೇ ಅವರ ಬರಹಗಳ ವೈಶಿಷ್ಟ್ಯ.

ಇತರರಿಗೆ ಪ್ರಚಾರ ಕೊಡುವುದೇ ಜಾಯಮಾನವಾಗಿದ್ದ ಶ್ರೀ ಕುಡ್ಪಿಯವರು ಸ್ವತಃ ಒಬ್ಬ ಕಲಾವಿದನೂ ಆಗಿದ್ದರು ಎಂಬುದು ಹಲವರಿಗೆ ಗೊತ್ತಿಲ್ಲ. ತನಗಾಗಿ ಮತ್ತು ತನ್ನನ್ನೇ ದೊಡ್ಡದು ಮಾಡಿ ಅವರು ತನ್ನ ಪತ್ರಿಕೆಯಲ್ಲಿ ಎಂದೂ ಬರೆದುದಿಲ್ಲ. ಅವರು ಕೆಲವು ತೈಲಚಿತ್ರಗಳನ್ನು ಸಿದ್ಧಗೊಳಿಸಿದ್ದಾರೆ. ಅವರ ಸ್ವಂತ ಚಿತ್ರವನ್ನು (Self Portrait) ಅವರೇ ಬರೆದುದನ್ನು ಅವರ ಕಚೇರಿಯಲ್ಲಿ ಕಾಣಬಹುದಿತ್ತು.

ಶ್ರೀ ಕುಡುಪಿ ವಾಸುದೇವ ಶೆಣೈಯವರ ರಾಜಕೀಯ ಜೀವನವು ಈ ತಲೆಮಾರಿನವರಿಗೆ ಪ್ರಾಯಶಃ ತಿಳಿದಿರಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ದಿವಂಗತ ಉಳ್ಳಾಲ ಶ್ರೀನಿವಾಸ ಮಲ್ಯರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಶ್ರೀ ಶೆಣೈಯವರು ಸ್ವಲ್ಪ ಸಮಯ ಕಾರ್ಯದರ್ಶಿಯಾಗಿದ್ದರು, ಹಲವರು ಮುಖಂಡರು ಸೆರೆಮನೆಗೆ ಹೋದಾಗ ಅಂದು ಕಾಂಗ್ರೆಸಿನ ಸೂತ್ರಚಾಲನೆ ಮಾಡಲು ಶ್ರೀ ಕುಡ್ಪಿಯವರು ನಿರ್ದೇಶಿತರಾಗಿದ್ದರು.

ಬಹುಮುಖ ಪ್ರತಿಭೆಯ ಶ್ರೀ ವಾಸುದೇವ ಶೆಣೈಯವರು ತನ್ನದೇ ಆದ ರೀತಿಯ ವ್ಯಕ್ತಿತ್ವ ಬೆಳೆಸಿಕೊಂಡಿದ್ದರು. ಸ್ವಪ್ರಯತ್ನದಿಂದ ತನ್ನನ್ನು ತಾನೇ ನಿರ್ಮಿಸಿಕೊಂಡ ಯೋಗ್ಯತೆ ಅವರದ್ದಾಗಿತ್ತು. "ವಾಸುಮಾಮ್'' ಎಂದು ಆತ್ಮೀಯರಿಗೂ, "ಕುಡ್ಪಿಯವರು" ಎಂದು ಜಿಲ್ಲೆಯಾದ್ಯಂತವೂ ಸುಪರಿಚಿತರಾಗಿದ್ದ ಇಂಥ ಮಹನೀಯರೊಬ್ಬರ ಆದರ್ಶವು ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶಕವಾಗಿದೆ.

## ಕೆ. ಕೆ. ಪೈ

(3ನೇ ಪುಟದಿಂದ)

ಹಂತವಾಗಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಲಾಗಿದೆ. ಹರಿಜನ ಗ್ರಾಮದತ್ತಿ ಸ್ವೀಕಾರ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶು ಸಂಗೋಪನೆಯೇ ಪ್ರಮುಖ ಕಸಬಾಗಿ ಉಳ್ಳವರು ಯಾರೂ ಇಲ್ಲ. ಅದನ್ನು ಉಪಕಸುಬಾಗಿ ಮಾಡುವವರಿಗೆ ನೆರವಾಗುವ ದೃಷ್ಟಿಯಿಂದ "ಪಶು ಸಂಗೋಪನಾ ಕ್ಲಿನಿಕ್" ಮಾಡಿದ್ದೇವೆ. ಇದು ಒಂದು ಹೊಸ ಪ್ರಯೋಗ.

ಸಣ್ಣ ಕೈಗಾರಿಕೆ ಪ್ರಸಕ್ತ ಆದ್ಯತಾ ರಂಗಗಳಲ್ಲಿ ಒಳಪಟ್ಟಿದ್ದು ನಮ್ಮ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ನಾವು ಕ್ರಮಬದ್ಧವಾಗಿ ಹೋಗಬೇಕಾಗುತ್ತದೆ. "ಇಷ್ಟು ಕೊಟ್ಟಿದ್ದೇವೆ" ಎಂದು ತೋರಿಸಿಕೊಳ್ಳುವುದಕ್ಕಾಗಿ 50 ಕೋಟಿ ರೂಪಾಯಿ ಕೊಡಲು ಆಗುವುದಿಲ್ಲ. ಜಾಗರೂಕತೆಯಿಂದ ಪರಿಶೀಲನೆ ನಡೆಸಿ ಹಣ ಒದಗಿಸಲಾಗುತ್ತದೆ.

ಪ್ರ: ಹೊಸಾಳದ ಮಾದರಿಯಲ್ಲೇ ಇತರ ಗ್ರಾಮಗಳಿಗೂ ಅಂತಹ ಸೇವಾ ಸೌಲಭ್ಯವನ್ನು ವಿಸ್ತರಿಸುವ ಆಲೋಚನೆಯಿದೆಯೇ?

ಉ: ಹೌದು. ಹೊಸಾಳದ್ದು ಒಂದು ಪ್ರಯೋಗ ಮಾತ್ರ. ಅದು ಯಶಸ್ವಿಯಾಗಿರುವುದರಿಂದ ಇತರ ಗ್ರಾಮಗಳಿಗೂ ಅದನ್ನು ವಿಸ್ತರಿಸಬೇಕೆಂದಿದೆ. ಇತರರೂ ಅಲ್ಲಿಗೆ ಬಂದು ನೋಡಿ ಹೋಗುತ್ತಿದ್ದಾರೆ.

ಪ್ರ: ಗ್ರಾಮಾಂತರ ಬ್ಯಾಂಕಿಂಗ್ ಸೌಲಭ್ಯ ವಿಸ್ತರಣೆಯ ಕುರಿತು ತಮ್ಮ ನಿಲುವೇನು? ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಕೃಷಿ ಕಾರ್ಮಿಕರ ಮತ್ತು ಗ್ರಾಮೀಣ ಕುಶಲ ಕರ್ಮಿಗಳ ಸಾಲ ಅವಶ್ಯಕತೆ ಪೂರೈಸುವುದು ಮತ್ತು ಅವರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ತ್ವರಿತಗೊಳಿಸುವ ಪ್ರಮುಖ ಉದ್ದೇಶದಿಂದ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ, ಸಿಂಡಿಕೇಟ್ ಬ್ಯಾಂಕಿನ ಆಶ್ರಯದಲ್ಲಿಯೂ ಈಗಾಗಲೇ 5 ಗ್ರಾಮೀಣ ಬ್ಯಾಂಕುಗಳನ್ನು ಆರಂಭಿಸಲಾಗಿದೆ.

ಗ್ರಾಮೀಣ ಬ್ಯಾಂಕು ಎನ್ನುವಾಗ ಕೇವಲ ಒಂದು ಬ್ಯಾಂಕು ಮಾತ್ರ ಎಂಬ ಸೀಮಿತ ಭಾವನೆ ಮೂಡುವುದಾದರೂ ಅದು ಗ್ರಾಮೀಣ ಅಭಿವೃದ್ಧಿಗಾಗಿರುವ ಒಂದು ಸಂಸ್ಥೆಯಾಗಿದೆ. 1951–52ರ ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷೆ ಪ್ರಕಾರ ಸಹಕಾರಿ ಸಂಘಗಳು ರೈತರ ಒಟ್ಟು ಸಾಲ ಅವಶ್ಯಕತೆಯ ಕೇವಲ ಶೇ. 33 ರಷ್ಟನ್ನು ಮಾತ್ರ ಒದಗಿಸಿವೆ; ತರಬೇತಿ ಪಡೆದ ಸಿಬಂದಿಗಳ ಕೊರತೆ, ಸ್ಥಾಪಿತ ಹಿತಾಸಕ್ತಿಗಳು, ರಾಜಕೀಯ ಹಸ್ತಕ್ಷೇಪ ಇತ್ಯಾದಿ ಕೆಲವು ಕಾರಣಗಳಿಂದಾಗಿ ಸಹಕಾರಿ ಸಂಘಗಳ ಬಗ್ಗೆ ಇದ್ದ ಭಾರೀ ಆಕಾಂಕ್ಷೆಗಳು ಈಡೇರದಾದವು. ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ಮತ್ತು ಅದರ ಒಳಿತು ಹಾಗೂ ಕೆಡುಕಿನತ್ತ ಪ್ರಭಾವ ಬೀರುವ ಅನೇಕ ಸಂಸ್ಥೆಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯೂ ಒಂದು. ಬ್ಯಾಂಕ್ ರಾಷ್ಟ್ರೀಕರಣದ ನಂತರ ಗ್ರಾಮೀಣ ಆರ್ಥಿಕ ಪ್ರಗತಿಯ ಕ್ಲಪ್ತ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಕೊನೆಗೂ ಸಾಧ್ಯವಾಯಿತು.

ಗ್ರಾಮೀಣ ಆರ್ಥಿಕತೆಯನ್ನು ಚುರುಕುಗೊಳಿಸುವಲ್ಲಿ ರಾಷ್ಟ್ರೀಕರಣದ ನಂತರ ವಾಣಿಜ್ಯ ಬ್ಯಾಂಕುಗಳು ಶ್ಲಾಘನೀಯ ಕೊಡುಗೆ ಸಲ್ಲಿಸಿದ್ದರೂ, ದೇಶದಲ್ಲಿನ ಗ್ರಾಮಗಳ ಸಂಖ್ಯೆ ಮತ್ತು ಗ್ರಾಮಾಂತರ ಜನಸಂಖ್ಯೆಯ ಪ್ರಮಾಣಗಳನ್ನು ಗಮನಿಸುವಾಗ ಇನ್ನೂ ಬಹಳಷ್ಟು ಸಾಧಿಸಬೇಕಾಗಿವೆ. ಇಂದು ತಲಾ 75 ಗ್ರಾಮಗಳಿಗೆ ಕೇವಲ ಒಂದು ಗ್ರಾಮೀಣ ಶಾಖೆ ಇರುವುದನ್ನು ನೋಡುವಾಗ ನಮ್ಮ ಮುಂದಿರುವ ಕೆಲಸದ ಬಾಹುಳ್ಯವನ್ನು ಅರಿಯಬಹುದು, ಈ ಗ್ರಾಮೀಣ ಬ್ಯಾಂಕುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಚಳವಳಿಯ ಬಲವರ್ಧಿಸುವುದರೊಂದಿಗೆ ಸಹಕಾರಿ ಸಂಸ್ಥೆಗಳ ಕೊರತೆಯನ್ನು ತುಂಬುದು ಎನ್ನಬಹುದು.

ಪ್ರ: ಐವತ್ತಾರರ ಹರೆಯದಲ್ಲೂ ನೀವು ಯೌವ್ವನೋತ್ಸಾಹಗಳಿಂದ ಕುಂದದ ಲವಲವಿಕೆಯಿಂದಿರುವ ರಹಸ್ಯವೇನು?

ಉ: ಅದು ಅವರವರ ದೃಷ್ಟಿಕೋನವನ್ನು ಮತ್ತು ಜೀವನದ ಶಿಸ್ತನ್ನು ಹೊಂದಿಕೊಂಡಿದೆ. ಯಾವುದೇ ಕೆಲಸ ಕಾರ್ಯವನ್ನಾದರೂ ಮನಃಪೂರ್ವಕವಾಗಿ ತನ್ಮಯತೆಯಿಂದ ಮಾಡಿದರೆ ಆಯಾಸ ತೋರುವುದಿಲ್ಲ.

ಪ್ರ: ಪ್ರಸಕ್ತ ಹುದ್ದೆಯಿಂದ ನೀವು ಶೀಘ್ರದಲ್ಲೇ ನಿವೃತ್ತರಾಗುವವರಿದ್ದೀರಿ. ಸುಮಾರು ಮೂರೂವರೆ ದಶಕಗಳ ಕಾಲ ನೀವು ಪಡೆದಿರುವ ಅನುಭವವನ್ನು ನಿವೃತ್ತರಾದ ಮೇಲೆ ಯಾವ ರೀತಿ ಜನಸೇವೆಗೆ ಬಳಸಬೇಕೆಂದಿದ್ದೀರಿ.

ಉ: ಕೃಷಿಯಲ್ಲಿ ನನಗೆ ತುಂಬಾ ಆಸಕ್ತಿಯಿದೆ. ಅದರೊಂದಿಗೆ ಸಮಾಜದ ಕೆಲಸ ಮಾಡಲಿಕ್ಕೂ ಅನುಕೂಲವಾಗುವುದು. ರಾಜಕೀಯವೂ ಬರಬಹುದು. ಆದರೆ ರಾಜಕೀಯ ಇಲ್ಲದ ಸಮಾಜ ಸೇವೆ ಮಾಡಲು ಸಾಧ್ಯ ಎಂದು ಹೇಳುವವರಲ್ಲಿ ನಾನೂ ಒಬ್ಬ.

## ಕದ್ರಿಯಲ್ಲಿ ಸಾಂಸ್ಕೃತಿಕ ಧಾರ್ಮಿಕ ಮಹೋತ್ಸವ

“ವಿಜ್ಞಾನ ಯುಗವು ಮಾನವನ ಬುದ್ಧಿಶಕ್ತಿಯನ್ನು ಬೆಳೆಸಿದೆ ನಿಜ. ಅದರಿಂದಾಗಿ ಪರಾಕ್ರಮದ ಕಾರ್ಯ ಸಾಧಿಸಿದಲ್ಲದೆ ಆಧುನಿಕ ಸವಲತ್ತುಗಳನ್ನು ಕರಗತ ಮಾಡಿಕೊಂಡಿರುವುದೂ ಸತ್ಯ. ಆದರೆ ಮಾನಸಿಕವಾಗಿ ವಿಕಾಸ ಹೊಂದಿ ಮಾನವನು ನೈತಿಕ ಶಕ್ತಿ ಬೆಳೆಸಿಕೊಳ್ಳಲು ಧರ್ಮದ ಆವಶ್ಯಕತೆಯಿದೆ'' ಎಂಬುದಾಗಿ ಮಕರಸಂಕ್ರಮಣದಂದು ಕದ್ರಿ ಶ್ರೀ ಮಂಜುನಾಥೇಶ್ವರ ದೇವಸ್ಥಾನದ ಆಶ್ರಯದಲ್ಲಿ ಕದ್ರಿ ತೀರ್ಥದ ಪವಿತ್ರ ಸನ್ನಿವೇಶದಲ್ಲಿ ಮಲ್ಲಿಕಾ ಕಲಾ ವೃಂದದವರು ಏರ್ಪಡಿಸಿದ 28ನೇ ವರ್ಷದ ಸಾಂಸ್ಕೃತಿಕ ಮತ್ತು ಧಾರ್ಮಿಕ ಉತ್ಸವದ ಮೊದಲ ದಿನ ಉದ್ಘಾಟನಾ ಭಾಷಣ ಮಾಡುತ್ತಾ ಅರಣ್ಯ ಇಲಾಖಾ ಕನ್ಸರ್ವೇಟರ್ ಶ್ರೀ ಬಿ. ಜಗನ್ನಾಥ ಶೆಟ್ಟಿಯವರು ಹೇಳಿದರು. ಸಂಸ್ಕೃತಿ ಧರ್ಮಗಳ ಬಗೆಗೆ ಅಲಕ್ಷ್ಯ ಸಲ್ಲದೆಂದೂ ಅಲ್ಲಗಳೆಯಲಾಗದೆಂದೂ ಅವರು ಒತ್ತಿ ಹೇಳುತ್ತ ಈಗ ಮುಂಚೆಗಿಂತ ಧರ್ಮದ ಪಾಲನೆ ಹೆಚ್ಚಾಗಿ ಆಗಬೇಕಾಗಿದೆಯೆಂದು ಅಭಿಪ್ರಾಯಪಟ್ಟರು ಮತ್ತು ದಿಕ್ಕುತೋಚದ ಯುವ ಜನಾಂಗಕ್ಕೆ ಕರೆಕೊಡುತ್ತ ಧರ್ಮದ ದಾರಿಯು ಸಮಸ್ಯೆಗಳಿಗೆ ಪರಿಹಾರವನ್ನೀಯುವುದೆಂದೂ ತಿಳಿಸಿದರು. ದೇವಸ್ಥಾನದ ಅಂಗಣದಲ್ಲಿನ ಕಲಾ ಮಂಟಪದಲ್ಲಿ ಜರಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ಲೋಕೋಪಯೋಗಿ ಇಲಾಖಾ ಸುಪರಿಂಟೆಂಡಿಂಗ್ ಇಂಜಿನಿಯರ್ ಶ್ರೀ ಎಸ್. ರುದ್ರಯ್ಯನವರು ವಹಿಸಿದ್ದರು. ಕದ್ರಿ ಜಾತ್ರೆಯ ಸಂದರ್ಭದಲ್ಲಿ ವರ್ಷಂಪ್ರತಿಯಂತೆ ಈ ಸಲ ತಾ. 14ರಂದು ಉತ್ಸವವು ಆರಂಭವಾಯಿತು. ಆರಂಭದಲ್ಲಿ ವೃಂದದ ಉಪಾಧ್ಯಕ್ಷ ಡಾ| ಜಿ. ಸಂಜೀವ ಮಲ್ಲಿಯವರು ಸ್ವಾಗತಿಸಿದರು. ಶ್ರೀ ಯು. ಯಸ್. ಕೃಷ್ಣ ರಾಯರು ಅತಿಥಿಗಳಿಗೆ ಹೂಹಾರ ಸಮರ್ಪಿಸಿದರು. ಪತ್ರಿಕೋದ್ಯಮಿ ಶ್ರೀ ಎಚ್. ಮನಮೋಹನ ಕಾಮತರು ಭಾಷಣ ಮಾಡುತ್ತ ಧರ್ಮ ಮತ್ತು ಸಂಸ್ಕೃತಿಯ ಮಹತ್ವವನ್ನು ವಿವರಿಸಿದರು. ಕೊನೆಯಲ್ಲಿ ಸಂಗೀತ ವಿದೂಷಿ ಶ್ರೀಮಂತಿ ಎಚ್. ಎಸ್. ಛಾಯಾಮಣಿ ಮತ್ತು ಬಳಗದವರಿಂದ ಗಾಯನ, ಬಿಜೈ ಯೂತ್ ಕ್ಲಬ್‌ನವರಿಂದ "ಜಟಾಯು ಮೋಕ್ಷ"ವೆಂಬ ಯಕ್ಷಗಾನ ಬಯಲಾಟ ಮೊದಲಾದ ಕಲಾ ಕಾರ್ಯಕ್ರಮಗಳಿದ್ದುವು, ತಾ. 22-1-78ರ ವರೆಗೆ ಪ್ರತಿ ದಿನ ಉಪನ್ಯಾಸಗಳು ಸಾಂಸ್ಕೃತಿಕ ಕಲಾಪಗಳು ಏರ್ಪಟ್ಟಿರುವುವು.

● ತಾ. 21ನೇ ಶನಿವಾರ ಕದ್ರಿ ರಥೋತ್ಸವ.